**ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ  5784 /2023  ಸಿ.ಡಬ್ಲೂ.7  ಪಿ.ಡಬ್ಲೂ.5

| | |
|---|---|
| ಹೆಸರು | ಮಲ್ಲೇಶ |
| ತಂದೆ/ಗಂಡ | ಶಿವಪ್ಪಾ |
| ವಯಸ್ಸು | 61 ವರ್ಷ |
| ಉದ್ಯೋಗ | ನಿವೃತ್ತ ಎ.ಎಸ್.ಐ |
| ವಾಸಸ್ಥಳ | ಕಲಬುರಗಿ |

ದಿನಾಂಕ 24-01-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ  ವಕೀಲರಿಂದ:**

ನಾನು  2020 ರಿಂದ 2024 ರವರೆಗೆ  ಮಾದನಹಿಪ್ಪರಗಾ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 30-08-2023 ರಂದು 6.00 ಗಂಟೆಗೆ  ನಾನು ಠಾಣಾಧಿಕಾರಿಯ ಕರ್ತವ್ಯದಲ್ಲಿದ್ದಾಗ  ಚಾಸ-1ರವರು ಠಾಣೆಗೆ ಬಂದು  ದೂರು ನೀಡಿದ ಮೇರೆ ಗುನ್ನ ಸಂಖ್ಯೆ 46/2023 ಅಂತಾ ಪ್ರಕರಣ ದಾಖಲಿಸಿಕೊಂಡು ನಂತರ ಪ್ರ.ವ.ವರದಿಯನ್ನು ನಮ್ಮ ಸಿಬ್ಬಂದಿ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿಃ 31-08-2023 ರಂದು ಗುನ್ನಾ ಸ್ಥಳಕ್ಕೆ ಬೇಟಿ ಕೊಟ್ಟು ಪಂಚನಾಮೆಯ ಸಲುವಾಗಿ ಚಾಸ-2 ಮತ್ತು 3ರವರನ್ನು ಬರಮಾಡಿಕೊಂಡು  ಅವರ ಸಮಕ್ಷಮ ಪಂಚನಾಮೆಯನ್ನು  ಮಾಡಿ  ಒಂದು  ಹಿಡಿ  ಗಾತ್ರದ  ಕಲ್ಲನ್ನು  ಜಪ್ತಿಪಡಿಸಿಕೊಂಡು  ಬೆ.9.00  ರಿಂದ  10.00 ಪಂಚನಾಮೆಯನ್ನು  ಮಾಡಿರುತ್ತೇನೆ.  ಅದೇ ದಿನ ಚಾಸಾ 4 ರವರ ಹೇಳಿಕೆ ಮತ್ತು ಚಾಸಾ 5 ರವರ ಕಡೆಯಿಂದ ಕಲಂ 61ಬಿ ಅಡಿಯಲ್ಲಿ ವರದಿ ಮತ್ತು ಭಾವ ಚಿತ್ರವನ್ನು ಪಡೆದುಕೊಂಡಿರುತ್ತೇನೆ. ದಿಃ 20-09-2023 ರಂದು  ಮುಂದಿನ ತನಿಖೆಗಾಗಿ ಚಾಸಾ 8 ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು  ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.  ಸಾಕ್ಷಿಯು ನಿಪಿ-2 ರಲ್ಲಿ ಇರುವ ಅವರ  ಸಹಿಯನ್ನು ನೋಡಿ ಗುರುತಿಸಿದ್ದು  ನಿಪಿ. 2 (ಬಿ) ಎಂದು ಗುರುತಿಸಲಾಯಿತು.  ನಿಪಿ-1 ರಲ್ಲಿ ಇರುವ ಅವರ  ಸಹಿಯನ್ನು ನೋಡಿ ಗುರುತಿಸಿದ್ದು  ನಿಪಿ. 1 (ಸಿ) ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಇರುವ ಅವರ  ಸಹಿಯನ್ನು ನೋಡಿ ಗುರುತಿಸಿದ್ದು  ನಿಪಿ. 3 (ಎ) ಎಂದು ಗುರುತಿಸಲಾಯಿತು. ಕಲಂ 65ಬಿ ಅಡಿಯಲ್ಲಿ ಸಲ್ಲಿಸಿದ

ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ನಿಪಿ. 5, ಸಾಕ್ಷಿಯ ಸಹಿಯನ್ನು ನಿಪಿ. 5 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಹಿಡಿ ಗಾತ್ರದ ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಮು. ಮಾ 1 ಅಂತಾ ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಮ್.ವಿ.ಇ. ವಕೀಲರಿಂದ:

ಗಾಯಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಾಗ ಆಸ್ಪತ್ರೆಯವರು ಎಮಎಲಸಿ ಪ್ರಕರಣವನ್ನು ದಾಖಲಿರುತ್ತಾರೆ ಎಂದರೆ ಸರಿ. ದಿಃ 04-08-2023 ರಂದು ನಮಗೆ ಎಮಎಲಸಿ ಬಗ್ಗೆ ಮಾಹಿತಿ ಬಂದಿದ್ದು ನಾವು ಹೋಗಿ ವಿಚಾರಣೆ ಮಾಡಿದಾಗ ಚಾಸಾ 1 ರವರು ನಾವು ಸಂಬಂಧಿಕರೊಂದಿಗೆ ವಿಚಾರಣೆ ಮಾಡಿ ದೂರನ್ನು ಸಲ್ಲಿಸುತ್ತೇವೆ ಅಂತಾ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಎಮಎಲಸಿ ವಿಚಾರಣೆಗಾಗಿ ಕಲಬುರಗಿ ಜಿಲ್ಲಾ ಆಸ್ಪತ್ರೆಗೆ ಹೋಗಿದ್ದೇನು. ಸದರಿ ವಿಷಯವನ್ನು ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಘಟನಾ ಸ್ಥಳವು ಮಾದನಹಿಪ್ಪರಗಾ ಪೋಲಿಸ್ ಠಾಣೆಯಿಂದ 12 ಕಿ.ಮೀ ಇರುತ್ತದೆ. ಮಾದನಹಿಪ್ಪರಗಾದಲ್ಲಿ ಸರ್ಕಾರಿ ಆಸ್ಪತ್ರೆ ಇರುತ್ತದೆ ಎಂದರೆ ಸರಿ. ಚಾಸಾ 1 ರವರಿಗೆ ಮಾದನ ಹಿಪ್ಪರಗಾ ಆಸ್ಪತ್ರೆ ಸಮೀಪ ಇರುತ್ತದೆ. ಮು.ಮಾ.1 ಕೆಂಪು ಬಣ್ಣದ್ದು ಇರುತ್ತದೆ. ಆಕಾರ ಗುಂಡಾಗಿ ಇರುತ್ತದೆ. ಸದರಿ ಮಾಹಿತಿಯನ್ನು ಪಂಚನಾಮೆಯನ್ನು ನಮೂದಿಸಿಲ್ಲ ಎಂದರೆ ಸರಿ. ನಿಪಿ. 3 ರಲ್ಲಿ ಜಿಪಿಎಸ್ ನಮೂದು ಇರುವುದಿಲ್ಲ ಎಂದರೆ ಸರಿ. ಸದರಿ ನಿಪಿ. 3 ರಲ್ಲಿ ಸ್ಥಳ ಮತ್ತು ದಿನಾಂಕ ನಮೂದಿಸಿಲ್ಲ ಎಂದರೆ ಸರಿ. ನಿಪಿ. 5 ರಲ್ಲಿ ಸರಿಯಾದ ವಿವರಣೆ ಇರುವುದಿಲ್ಲ ಎಂದರೆ ಸರಿ. ಚಾಸಾ 1 ರವರು ಮನೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಚಾಸಾ 1 ರವರು ಕುಟುಂಬದಲ್ಲಿ ಯಾರ ಚರ್ಚೆ ಮಾಡಿರುತ್ತಾರೆ ಅಂತಾ ವಿಚಾರಣೆ ಮಾಡಿರುವುದಿಲ್ಲ. ನನ್ನ ದಾಖಲೆಗಳಲ್ಲಿ ಎಮಎಲಸಿ ಬಗ್ಗೆ ಮಾಹಿತಿ ಬಂದಿತ್ತು ಅಂತಾ ನಮೂದು ಮಾಡಿಲ್ಲ ಎಂದರೆ ಸರಿ. ಚಾಸಾ 4 ರವರ ಹೇಳಿಕೆಯಲ್ಲಿ ಸಮಯ ನಮೂದು ಮಾಡಿಲ್ಲ ಎಂದರೆ ಸರಿ. ನನ್ನ ತನಿಖಾ ಕಾಲದಲ್ಲಿ ಚಾಸಾ 1 ಮತ್ತು ಆರೋಪಿತರು ಸಂಬಂಧಿಕರು ಇದ್ದು ಅವರ ಮಧ್ಯೆ ಸಂಬಂದ ಸರಿ ಇಲ್ಲದ ಕಾರಣ ದೂರನ್ನು ಸಲ್ಲಿಸಿರುತ್ತಾರೆ ಅಂತಾ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಸುತ್ತಮುತ್ತಲಿನ ಜನರ ಹೇಳಿಕೆಯನ್ನು ಪಡೆದುಕೊಂಡಿಲ್ಲ, ಸಾಕ್ಷಿಯು ಮುಂದುವರೆದು ಅವರ ಅಣ್ಣತಮ್ಮಂಕಿ ಇದ್ದ ಕಾರಣ ತೆಗೆದುಕೊಂಡಿಲ್ಲ ಅಂತಾ ನುಡಿಯುತ್ತಾರೆ. ನನಗೆ ಚಾಸಾ 1 ರವರು ಸುಳ್ಳು ಪಿರ್ಯಾಧಿಯನ್ನು ಕೊಡುತ್ತಿದ್ದಾರೆ ಅಂತಾ ಗೊತ್ತಿದ್ದರೂ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಕರಣ ದಾಖಲಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 30-08-2023 ರಂದು 6.00 ಗಂಟೆಗೆ ನಾನು ಠಾಣಾಧಿಕಾರಿಯ ಕರ್ತವ್ಯದಲ್ಲಿದ್ದಾಗ ಚಾಸ-1ರವರು ಠಾಣೆಗೆ ಬಂದು ದೂರು ನೀಡಿದ ಮೇರೆ ಗುನ್ನ ಸಂಖ್ಯೆ 46/2023 ಅಂತಾ ಪ್ರಕರಣ ದಾಖಲಿಸಿಕೊಂಡು ನಂತರ ಪ್ರ.ವ.ವರದಿಯನ್ನು ನಮ್ಮ ಸಿಬ್ಬಂದಿ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 31-08-2023 ರಂದು ಗುನ್ಹಾ ಸ್ಥಳಕ್ಕೆ ಬೇಟಿ ಕೊಟ್ಟು ಪಂಚನಾಮೆಯ ಸಲುವಾಗಿ ಚಾಸ-2 ಮತ್ತು 3ರವರನ್ನು ಬರಮಾಡಿಕೊಂಡು ಅವರ ಸಮಕ್ಷಮ ಪಂಚನಾಮೆಯನ್ನು ಮಾಡಿ ಒಂದು ಹಿಡಿ ಗಾತ್ರದ ಕಲ್ಲನ್ನು ಜಪ್ತಿಪಡಿಸಿಕೊಂಡು ಬೆ.9.00 ರಿಂದ 10.00 ಪಂಚನಾಮೆಯನ್ನು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ.  ಅದೇ ದಿನ ಚಾಸಾ 4 ರವರ ಹೇಳಿಕೆ ಮತ್ತು ಚಾಸಾ 5 ರವರ ಕಡೆಯಿಂದ ಕಲಂ 61ಬಿ ಅಡಿಯಲ್ಲಿ ವರದಿ ಮತ್ತು ಭಾವ ಚಿತ್ರವನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 20-09-2023 ರಂದು  ಮುಂದಿನ ತನಿಖೆಗಾಗಿ ಚಾಸಾ 8 ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ